# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 773
ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
ಉತ್ತರಿಸುವ ದಿನಾಂಕ : 17.09.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಗಳಲ್ಲಿ ಹೊರಮೂಲ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರು ನಿಗಮದ ಲಕ್ಷಾಂತರ ಹಣವನ್ನು ದುರುಪಯೋಗ ಪಡಿಸಿಕೊಂಡು ತನ್ನ ಸ್ವಂತ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ವಿವರ ನೀಡುವುದು), | ಹೌದು.<br>ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೀದರ್ ಜಿಲ್ಲೆಯಲ್ಲಿ 2019ನೇ ಸಾಲಿನಲ್ಲಿ ಹೊರಮೂಲ ಆಧಾರದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಶ್ರೀ.ಉದಯಕುಮಾರ ನಾಯಕ. ಸಾ:ಖಾನಾಪುರ. ಬಾಲ್ಕಿ ತಾ., ಹಾಗೂ ಶ್ರೀ.ಸುರೇಶ ಬಿನ್ ಜ್ಞಾನೇಶ್ವರ. ಸಾ:ಎಣಕೂರ. ಬಾಲ್ಕಿ. ಇವರುಗಳು ನಿಗಮದ ರೂ.23.50ಲಕ್ಷಗಳನ್ನು ತಮ್ಮ ಸ್ವಂತ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ನ್ಯೂ ಟೌನ್ ಪೋಲಿಸ್ ಠಾಣೆ, ಬೀದರ್ ಟೌನ್ ಸರ್ಕಲ್‌ನಲ್ಲಿ ಅಪರಾಧ ಸಂಖ್ಯೆ:0013/2019. ದಿನಾಂಕ:17.01.2019 ರಂದು ಎಫ್.ಐ.ಆರ್‌ನ್ನು ದಾಖಲು ಮಾಡಲಾಗಿದೆ ಹಾಗೂ ಅವರಿಂದ ಹಣ Recovery ಮಾಡಲಾಗಿದೆ. |
| ಆ) | ಹಾಗಿದ್ದಲ್ಲಿ. ಇಂತಹ ಸಿಬ್ಬಂದಿಗಳನ್ನು ಮತ್ತೊಂದು ನಿಗಮದಲ್ಲಿ ಪುನರ್ (ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನೇಮಕ ಮಾಡಿಕೊಂಡಿರುವುದು ನಿಜವಲ್ಲವೇ: ಇಂತಹ ಸಿಬ್ಬಂದಿಗಳನ್ನು ಎಷ್ಟು ಕಾಲಮಿತಿಯೊಳಗೆ ನಿಗಮದಿಂದ ಹಿಂತಿರುಗಿಸಲಾಗುವುದು: | ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಮಾಹಿತಿ ಕೊರತೆಯಿಂದ ಪುನರ್ ನೇಮಕಗೊಂಡಿದ್ದ ಇಂತಹ ಸಿಬ್ಬಂದಿಯ ಸೇವೆಯನ್ನು ಈಗಾಗಲೇ ನಿಗಮದಿಂದ ತೆಗೆದುಹಾಕಲಾಗಿರುತ್ತದೆ. |
| ಇ) | ಇಂತಹ ಸಿಬ್ಬಂದಿಗಳ ಮೇಲೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಸಹ ಸದರಿ ಸಿಬ್ಬಂದಿಗಳನ್ನು ಪುನ: ಮುಂದುವರೆಸಲು ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು). | |

ಸಂಖ್ಯೆ: ಸಕಇ 434 ಎಸ್‌ಡಿಸಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.